ವಿತರಿಸಬೇಕೆಂದು ಒತ್ತಾಯ ಮಾಡಿ ನಿಮ್ಮ ಉತ್ತರದಿಂದ ನಮಗೆ ಸಮಾಧಾನವಿಲ್ಲದಿರುವುದರಿಂದ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

(ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

**ಅಧ್ಯಕ್ಷರು:-** ಮಾನ್ಯ ಮೊಯಿಲಿಯವರೇ ನಾನು ತಮಗೆ ಅಪೀಲು ಮಾಡಿಕೊಳ್ಳುವದೇನೆಂದರೆ ತಾವು ಮಾಜಿ ಮುಖ್ಯಮಂತ್ರಿಗಳು ಮತ್ತು ಖರ್ಗೆಯವರು ಹಾಗೂ ಉಳಿದವರೆಲ್ಲರೂ ಕೂಡ they all have been in the Government. ಗೌರ್ನರ್ಸ್ ಅಡ್ರೆಸ್‌ಗೆ ನಾವು ಮೋಷನ್ ಆಫ್ ಥ್ಯಾಂಕ್ಸ್ ಅಡಾಪ್ಟ್ ಮಾಡುವಾಗ it is an honour shown to the constitutional functionary. I appeal to you. You have your score settled with the Government. I will not come in the way. But I have to put the motion to vote. I am appaling to you. There is no precedent earlier in this House as I have gone through where the Governor's Address was put into this kind of a perculiar sitution.

**6.10 ಪಿ.ಎಂ.**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಾವು ಗವರ್ನರ್ ಅಡ್ರೆಸ್‌ಗೆ ಒಂದು ಅವಮಾನ ಮಾಡಬೇಕು ಅಥವಾ ಅವಹೇಳನ ಮಾಡಬೇಕು ಎಂಬ ಉದ್ದೇಶ ಇಲ್ಲ. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳೇ ಅನೇಕ ಸಾರಿ ಹೇಳಿದ್ದಾರೆ. ಏನೆಂದು ಹೇಳಿದ್ದಾರೆಂದರೆ ಗವರ್ನರ್ ಮೋಷನ್ ಆಫ್ ಥ್ಯಾಂಕ್ಸ್ ಇರುತ್ತದೆ, ಆಗ ಯಾರ ಪರ ಎಷ್ಟು ಮತಗಳು ಬರುತ್ತವೆ ಅಥವಾ ಇಲ್ಲ ಎನ್ನತಕ್ಕದ್ದು ಅದೇ ಒಂದು ವೋಟ್ ಆಫ್ ಕಾನ್‌ಫಿಡೆನ್ಸ್ ಎಂದು ಅವರೇ ಹೇಳಿದರು. ಅಂದರೆ ಈಗ ಆ ಒಂದು ಗವರ್ನರ್ ಅಡ್ರೆಸ್ ಮೇಲೆ ವೋಟ್ ಆಫ್ ಕಾನ್‌ಫೀಡೆನ್ಸ್ ಮತಗಳನ್ನು ಗಳಿಸಿಕೊಳ್ಳಬೇಕು ಅಥವಾ ಪಡೆದುಕೊಳ್ಳಬೇಕೆಂಬ ಅಭಿಪ್ರಾಯದಿಂದ ಅವರು ಹೊರಗಡೆ ಹೇಳಿದಾಗ ಇದು ನೀವು ಸರಿ ಎಂದು ಹೇಳಿದರೆ ನಾವು ಒಪ್ಪುತ್ತೇವೆ.

**ಅಧ್ಯಕ್ಷರು:-** ಸನ್ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿರತಕ್ಕ ಭಾಷಣಕ್ಕೆ ನಾವೇನು ಗೌರವ ಪೂರ್ವಕವಾಗಿ ವಂದನೆಯನ್ನು ಸಲ್ಲಿಸುತ್ತೇವೆ. ಅದನ್ನು ಓಟಿಗಾಗಿ ಪರಿವರ್ತನೆ ಮಾಡತಕ್ಕದ್ದನ್ನು ಯಾರೂ ಮಾಡಬಾರದು. ಅದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹೇಳಿದ್ದಾರೆ; ಅದು ರೂಮರ್ ಅಲ್ಲ. ಈಗ ಆ ವಿಚಾರ ಪ್ರತಿ ಒಂದು ಪತ್ರಿಕೆಯಲ್ಲಿ ಬಂದಿದೆ. ತಾಕತ್ತಿದ್ದರೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಆಗ ಅವರು ಮಾಡಿಕೊಳ್ಳಲಿ ಎಂದು ಹೇಳಿದ್ದಾರೆ.